ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 76/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಂಜೀವ ಭಜಂತ್ರಿ | ಪ್ರಾಸಾಃ 17 |
| ತಂದೆಯ ಹೆಸರು | : | ಹನುಮಂತು | ಚಾಸಾಃ 25 |
| ಪ್ರಾಯ | : | 29 ವರ್ಷ | **ದಿನಾಂಕಃ 21.07.2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸೈಬರ್ ತಾಂತ್ರಿಕ ಸಹಾಯಕ, ಸಿಐಡಿ ಬೆಂಗಳೂರು | |
| ವಾಸಸ್ಥಳ | : | ಬೆಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಮಂಗಳೂರಿನ ಬಜ್ಪೆ ಪೊಲೀಸ್ ಠಾಣೆ ಯಲ್ಲಿ ದಿನಾಂಕ 08.03.2018 ರಿಂದ 28.05.2023 ರವರೆಗೆ ಆರಕ್ಷಕ ಪೇದೆ ಆಗಿ ಕರ್ತವ್ಯ ಮಾಡಿರುತ್ತೇನೆ.

2. ದಿನಾಂಕ 28.11.2022 ರಂದು ಬೆಳಗ್ಗೆ ನಾನು ತನಿಖಾದಿಕಾರಿ ಯವರೊಂದಿಗೆ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಅಲ್ಲಿ ಚಾಸಾ-1 ಸಂತೋಷ್ ಕೋಟ್ಯಾನ್ ರವರ ಹೇಳಿಕೆಯನ್ನು ತನಿಖಾಧಿಕಾರಿಯವರು ದಾಖಲಿಸಿಕೊಂಡು ಅದನ್ನು ನನಗೆ ನೀಡಿ, ಚಾಸಾ-26 ರವರಿಗೆ ಠಾಣೆಯಲ್ಲಿ ಕೊಡುವಂತೆ ಸೂಚಿಸಿದರು. ನಾನು ಚಾಸಾ-1 ರವರ ಹೇಳಿಕೆಯನ್ನು ಠಾಣೆಗೆ ತೆಗೆದುಕೊಂಡು ಹೋಗಿ ಚಾಸಾ-26 ರವರಿಗೆ ನೀಡಿರುತ್ತೇನೆ. ಚಾಸಾ-26 ರವರು ಸದರಿ ಹೇಳಿಕೆಯ ಆಧಾರದಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಕರಣದ ಕಡತವನ್ನುನನಗೆ ನೀಡಿ ಅದನ್ನು ತನಿಖಾಧಿಕಾರಿಯವರಿಗೆ ನೀಡುವಂತೆ ಸೂಚಿಸಿದರು. ಅದರಂತೆ ನಾನು ಕಡತವನ್ನು ತನಿಖಾದಿಕಾರಿಯವರಿಗೆ ಠಾಣೆಯಿಂದ ಘಟನಾ ಸ್ಥಳಕ್ಕೆ ತಂದು ಕೊಟ್ಟಿರುತ್ತೇನೆ.

3. ತನಿಖಾಧಿಕಾರಿಯವರು ಘಟನಾ ಸ್ಥಳದಲ್ಲಿ ಸ್ಥಳ ಮಹಜರನ್ನು ಮಾಡಿದ್ದು ಅವರು ಸೂಚಿಸಿದಂತೆ ನನ್ನ ಮೊಬೈಲಿನಿಂದ ಪೋಟೋವನ್ನು ತೆಗೆದಿರುತ್ತೇನೆ. ನಂತರ ದಿನಾಂಕ 29.11.2022 ರಂದು ಆರೋಪಿ ದುರ್ಗೇಶ್ ಕೃತ್ಯಕ್ಕೆ ಬಳಸಿದ ಮರದ ರೀಪೀಸ್ ಪಟ್ಟಿಯನ್ನುಕೃತ್ಯ ನಡೆದ ಸ್ಥಳದಲ್ಲಿ ತೋರಿಸಿದ್ದು ಅದನ್ನು ತನಿಖಾಧಿಕಾರಿಯವರು ಅಮಾನತ್ತುಪಡಿಸಿಕೊಂಡಿದ್ದು ಆ ಸಮಯದಲ್ಲಿ ತನಿಖಾಧಿಕಾರಿಯವರು ಸೂಚಿಸಿದಂತೆ ನನ್ನ ಮೊಬೈಲಿನಲ್ಲಿ ಪೋಟೋವನ್ನು ತೆಗೆದಿರುತ್ತೇನೆ.

4. ನಂತರ ಸದರಿ 2 ಪೋಟೋಗಳನ್ನು ನಾನು ಬಜ್ಪೆ ಸ್ಟುಡಿಯೋದಲ್ಲಿ ಯಥಾಸ್ಥಿತಿಯಲ್ಲಿ ಪ್ರಿಂಟ್ ಔಟ್ ಹಾಕಿಸಿ ಅದನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಈ ಬಗ್ಗೆ ನಾನು ತನಿಖಾಧಿಕಾರಿಯವರಿಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65ಬಿ ರಂತೆ ಪ್ರಮಾಣಪತ್ರವನ್ನು ನೀಡಿರುತ್ತೇನೆ. ತನಿಖಾಧಿಕಾರಿಯವರಿಗೆ ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ.

5. ಈಗ ನೋಡುತ್ತಿರುವ ಫೋಟೋವು ನಾನು ಸ್ಥಳ ಮಹಜರು ಸಮಯದಲ್ಲಿ ತೆಗೆದ ಫೊಟೊವಾಗಿದ್ದು ಅದನ್ನು ಗುರುತಿಸುತ್ತೇನೆ. ಸದರಿ ಫೊಟೋವನ್ನು ಈಗಾಗಲೇ ನಿಪಿ-3 ರಂತೆ ಗುರುತಿಸಲಾಗಿರುತ್ತದೆ. ಈಗ ನೋಡುತ್ತಿರುವ ಇನ್ನೊಂದು ಫೋಟೋವು ನಾನು ಆರೋಪಿ ಕೃತ್ಯಕ್ಕೆ ಬಳಸಿದ ರೀಪೀಸ್ ಪಟ್ಟಿಯನ್ನು ಹಾಜರುಪಡಿಸಿದ ಸಮಯದಲ್ಲಿ ತೆಗೆದ್ದಾಗಿದ್ದು ಗುರುತಿಸುತ್ತೇನೆ. ಸದರಿ ಫೊಟೋವನ್ನು ಈಗಾಗಲೇ ನಿಪಿ-7 ರಂತೆ

ಗುರುತಿಸಲಾಗಿರುತ್ತದೆ. ಈಗ ನೋಡುತ್ತಿರುವ ದಾಖಲಾತಿಯು ನಾನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65ಬಿ ರಡಿ ನೀಡಿದ ದೃಡೀಕರಣ ಪತ್ರವಾಗಿದ್ದು ಅದರಲ್ಲಿ ನನ್ನ ಸಹಿ ಇದ್ದು ಗುರುತಿಸುತ್ತೇನೆ. ಸದರಿ ದೃಡೀಕರಣ ಪತ್ರವನ್ನು **ನಿಪಿ-17** ರಂತೆಯೂ , ಸಾಕ್ಷಿಯು ಗುರುತಿಸುತ್ತಿರುವ ಅವರ ಸಹಿಯನ್ನು **ನಿಪಿ-17(ಎ)** ರಂತೆ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಡಿ.ಎಸ್. ವಕೀಲರಿಂದ ಆರೋಪಿಯ ಪರ**

6. ನಾನು ದಿನಾಂಕ 28.11.2024 ರಂದು ತನಿಖಾಧಿಕಾರಿಯವರೊಂದಿಗೆ ಘಟನಾ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಅಲ್ಲಿ ತನಿಖಾಧಿಕಾರಿಯವರು ಚಾಸಾ-1 ರವರ ಹೇಳಿಕೆಯನ್ನು ಪಡೆದು ನನಗೆ ಕೊಟ್ಟಿರಲಿಲ್ಲ ಮತ್ತು ನಾನು ಅದನ್ನು ಚಾಸಾ-26 ರವರಿಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರಿಗೆ ಕಡತವನ್ನು ಠಾಣೆಯಿಂದ ತಂದು ಕೊಟ್ಟಿರಲೂ ಇಲ್ಲ ಎಂದರೆ ಸರಿಯಲ್ಲ.

7. ನಮ್ಮ ಠಾಣೆಯಲ್ಲಿ ಕ್ಯಾಮೆರಾ ಇತ್ತು ಎಂದರೆ ಸರಿ. ಸದರಿ ಕ್ಯಾಮೆರಾವನ್ನು ಘಟನಾ ಸ್ಥಳಕ್ಕೆ ತೆಗೆದುಕೊಂಡು ಹೋಗದಿದ್ದುದರಿಂದ ನನ್ನ ಮೊಬೈಲಿನಲ್ಲಿ ಫೋಟೊವನ್ನು ತೆಗೆಯಲಾಗಿತ್ತು. ನಾನು ಹೇಳಿದಂತೆ ಘಟನಾ ಸ್ಥಳದಲ್ಲಿ ಯಾವುದೇ ಫೋಟೋವನ್ನು ಮಹಜರು ಸಮಯದಲ್ಲಿ ನಾನು ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ಮರದ ರೀಪೀಸ್ ಪಟ್ಟಿಯನ್ನು ಹಾಜರುಪಡಿಸಿದ್ದಾನೆ ಎಂದು ಹೇಳುವ ಸಮಯದಲ್ಲೂ ನಾನು ಯಾವುದೇ ಫೋಟೋ ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ಬಜ್ಪೆ ಫೋಟೋ

ಸ್ಟುಡಿಯೋದವರು ನನ್ನ ಮೊಬೈಲಿನಲ್ಲಿ ತೆಗೆದ ಫೋಟೊವನ್ನು ಪ್ರಿಂಟ್ ಔಟನ್ನು ತೆಗೆದು ನನಗೆ ಕೊಟ್ಟಿದ್ದರು. ನಾನು ವೈಯಕ್ತಿಕವಾಗಿ ಸದರಿ ಫೋಟೋವನ್ನು ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-17 ರಂತೆ ಸುಳ್ಳು ದೃಡೀಕರಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ**</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.